## ತೆಂಗಿನಕಾಯಿಗೆ ಟಿನ್ ಶೀಟ್ ಕಾವಲು!

ಚಿತ್ರದಲ್ಲಿರುವ (ಸುಮಾರು 300) ತೆಂಗಿನ ಮರಗಳನ್ನು ಗಮನಿಸಿ. ಪ್ರತಿ ಮರಕ್ಕೂ ಸುಮಾರು 3 ಅಡಿ ಉದ್ದದ ಟಿನ್ ಶೀಟ್ ತಗಡನ್ನು ಹೊಡೆಯಲಾಗಿದೆ! ಇದಕ್ಕೆ ಕಾರಣ ಏನಿರಬಹುದು ಎಂದು ಚಿಂತಿಸಬೇಡಿ. ಉತ್ತರವೂ ಇಲ್ಲೇ ಇದೆ. ತೆಂಗಿನಕಾಯಿ ಕದಿಯಲು ಮಾನವ ಮರವೇರದಂತೆ ತಡೆಯಲು, ಮಂಗಗಳ ಉಪಟಳಕ್ಕೆ ಕಡಿವಾಣ ಹಾಕಲು ರೈತರೊಬ್ಬರು ಟಿನ್ ಶೀಟ್ ಮೊರೆ ಹೋಗಿದ್ದಾರೆ.

ಇಷ್ಟೇ ಅಲ್ಲದೆ ತೆಂಗಿನಮರಕ್ಕೆ ಮೂರನೇ ಕಳ್ಳನ ಕಾಟವೂ ಇದೆ. ಅದುವೇ ಖದೀಮ ಹೆಗ್ಗಣ. ಕೆಲ ಹೆಗ್ಗಣಗಳು ಗಾತ್ರದಲ್ಲಿ ಯಾವ ಹಂದಿ ಮರಿಗೂ ಕಡಿಮೆ ಇಲ್ಲದಂತಿವೆ. ಇವು ರಾತ್ರಿ ಮರವೇರಿ ಎಳನೀರು ಕುಡಿದು ಎಸೆಯುವ ಚಾಕಚಕ್ಯತೆಯನ್ನೂ ಹೊಂದಿವೆ. ಇವುಗಳ ತಡೆಗೂ ಟಿನ್ ಶಿಟ್ ಅಳವಡಿಕೆಯು ಸಹಕಾರಿ.

ಅಷ್ಟಕ್ಕೂ ಈ ತೋಟವಿರುವುದು ಹೊನ್ನಾಳಿ–ಬೈಂದೂರ್ ರಾಜ್ಯ ಹೆದ್ದಾರಿಯ ಹೊಸನಗರ ಮೇಲಿನ ಬೆಸಿಗೆ ನಡುವೆ ಗುರುಶಕ್ತಿ ಸಂಸ್ಥೆಯ ಒಡೆತನದ ಜಾಗದಲ್ಲಿ. ಟಿನ್ ಶೀಟ್ ತಗಡು ಹೊಡೆದ ಮೇಲೆ ಖದೀಮರ ಉಪಟಳ ಇಲ್ಲವಾಗಿ ಹೆಚ್ಚು ಹೆಚ್ಚು ತೆಂಗಿನ ಕಾಯಿಸಿಗುತ್ತಿದೆ ಎಂಬುದು ಮಾಲೀಕರ ಮಾತು!

–ನಗರ ಗುರುದೇವ್ ಭಂಡಾರ್ಕರ್, ಹೊಸನಗರ



## ಹಂಪಿಯ ವಿಠ್ಠಲ ಪಂಢರಾಪುರದಲ್ಲಿ!

ವಿಜಯನಗರ ಅರಸರ ಕಾಲದಲ್ಲಿ ಹಂಪಿಯಲ್ಲಿ ನಿರ್ಮಾಣಗೊಂಡ ದೇಗುಲಗಳ ಪೈಕಿ ಅತ್ಯಂತ ಹೆಸರುವಾಸಿಯಾದ ದೇಗುಲ ಶ್ರೀ ವಿಜಯ ವಿಠ್ಠಲ ದೇಗುಲ. ಈ ದೇವಸ್ಥಾನವು ತನ್ನ ವಿಶಿಷ್ಟ ಶಿಲ್ಪಕಲಾ ವೈಭವಕ್ಕೆ ಜಗತ್ ಪ್ರಸಿದ್ಧಿಯಾಗಿದೆ. ಈ ದೇಗುಲ ದರ್ಶನಕ್ಕೆ ದೇಶ ವಿದೇಶಗಳಿಂದ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಬರುವುದುಂಟು.

ಸಡಗರ ಸಂಭ್ರಮದಿಂದ ದೇಗುಲದ ಗರ್ಭಗೃಹದತ್ತ ಧಾವಿಸುವ ಪ್ರವಾಸಿಗರಿಗೆ ವಿಜಯ ವಿಠ್ಠಲ ಮೂರ್ತಿ ದರ್ಶನ ಕೊಡದೇ ತೀವ್ರ ನಿರಾಸೆಯುಂಟಾಗುತ್ತದೆ. ಗರ್ಭಗುಡಿಯಲ್ಲಿ ವಿಜಯ ವಿಠ್ಠಲನ ಮೂರ್ತಿಯೇ ಇಲ್ಲದಿರುವುದು. ಕಾರಣ ತಿಳಿದ ಪ್ರವಾಸಿಗರು ಅಚ್ಚರಿಗೆ ಒಳಗಾಗುತ್ತಾರೆ. ಅನ್ಯ ಧರ್ಮೀಯ ರಾಜರ ಆಕ್ರಮಣದ ವೇಳೆ ಇಲ್ಲಿದ್ದ ವಿಠ್ಠಲನ ಮೂರ್ತಿಯನ್ನು ಕಾಪಾಡುವ ಸಲುವಾಗಿ ಶ್ರೀಕೃಷ್ಣದೇವರಾಯನ ಆಳ್ವಿಕೆಯ ಸಮಯದಲ್ಲೇ ಪಂಢರಾಪುರಕ್ಕೆ ಸಾಗಿಸಿ, ಅಲ್ಲಿ ಪ್ರತಿಷ್ಠಾಪಿಸಲಾಯಿತೆಂದು ಗೈಡ್‌ಗಳು ತಿಳಿಸುತ್ತಾರೆ.

ಗರ್ಭಗುಡಿಯಲ್ಲಿ ವಿಠ್ಠಲನ ಮೂರ್ತಿ ಇಲ್ಲದಿದ್ದರೇನಂತೆ, ದೇಗುಲದ ದಕ್ಷಿಣ ಭಾಗದಲ್ಲಿರುವ ಗೋಪುರ ದ್ವಾರದ ಇಕ್ಕೆಲಗಳಲ್ಲಿ ವಿಠ್ಠಲ ಮತ್ತು ರುಕ್ಮಿಣಿಯ ಸುಮಾರು ನಾಲ್ಕು ಅಡಿ ಎತ್ತರದ ಮೂರ್ತಿಗಳನ್ನು, ಕಲ್ಲಿನ ರಥದ ಉತ್ತರ ಭಿತ್ತಿಯಲ್ಲಿ ಹಾಗೂ ಅದರ ಮುಂದಿರುವ ತುಳಸಿ ಕಟ್ಟೆಯಲ್ಲಿ ಸುಂದರವಾದ ವಿಠ್ಠಲ ಮೂರ್ತಿಗಳನ್ನು ಪ್ರವಾಸಿಗರು ಇಂದಿಗೂ ನೋಡಬಹುದಾಗಿದೆ.

–ಜಿ. ನಾಗೇಂದ್ರ, ಕಾವೂರು, ಸಂಡೂರು





## ಬೆಂಗಳೂರಿನಲ್ಲೊಂದು ಸ್ವಾತಂತ್ರ್ಯ ಸ್ಮಾರಕ!

ಸ್ವಾತಂತ್ರ್ಯ ಸಂಗ್ರಾಮದ ಹೋರಾಟದಲ್ಲಿ ಮಡಿದ ವೀರರ ನೆನಪಿನಲ್ಲಿ ದೇಶ ಮತ್ತು ನಾಡಿನ ಹಲವೆಡೆ ಸ್ಮಾರಕಗಳು ನಿರ್ಮಾಣಗೊಂಡಿವೆ. ಆದರೆ ಬೆಂಗಳೂರಿನ ಹೃದಯ ಭಾಗದಲ್ಲಿ ನಿರ್ಮಾಣವಾದ ಸ್ಮಾರಕ ಯಾರ ಗಮನಕ್ಕೂ ಬಾರದೆ ಇರುವುದು ದುರದೃಷ್ಟಕರ. ಕೆಂಪೇಗೌಡ ರಸ್ತೆ ಬಳಿಯ ಅವೆನ್ಯೂ ರಸ್ತೆ ಎದುರಿನ ವೃತ್ತದಲ್ಲಿ ಇರುವ ಬನಪ್ಪ ಪಾರ್ಕಿನಲ್ಲಿ ನಾರಿಮನ್ ಗಲಭೆಯಲ್ಲಿ ಮಡಿದವರ ನೆನಪಿಗಾಗಿ 1995ರಲ್ಲಿ ಕಪ್ಪು ಗ್ರಾನೈಟ್‌ನಿಂದ ಸುಂದರವಾಗಿ ನಿರ್ಮಿಸಿದ ಸ್ಮಾರಕ ಇದ್ದು, ಶಾಮಣ್ಣ, ಜೆ.ವಿ. ತಿರುಮಲ್ಲಯ್ಯ, ಪ್ರಹ್ಲಾದ ಶೆಟ್ಟಿ ಮತ್ತು ಗುಂಡಪ್ಪ ಅವರ ಹೆಸರನ್ನು ಕೆತ್ತಲಾಗಿದೆ.

–ಶ್ರೀನಿವಾಸ ಮೂರ್ತಿ ಎನ್.ಎಸ್.

## ಹಾವಿನ ಮಿಥುನ ಶಿಲ್ಪ

ಹಾವೇರಿಯ ಗುರುಪಾದ ದೇವರ ಮಠದ ಮೇಲ್ಭಾವಣಿಯಲ್ಲಿ ಕಂಡುಬರುವ ಉಬ್ಬು ಶಿಲ್ಪವಿದು. ನಾಗರ ಹಾವಿನ ಮಿಥುನ ಶಿಲ್ಪವನ್ನು ಇಲ್ಲಿ ಸುಂದರವಾಗಿ ಕೆತ್ತಲಾಗಿದೆ. ಎರಡು ಹಾವುಗಳು ಒಂದಕ್ಕೊಂದು ಸರಪಣಿಯಂತೆ ಹೆಣೆದುಕೊಂಡಿವೆ. ಇಲ್ಲಿಗೆ ಬರುವ ಪ್ರವಾಸಿಗರ ಆಕರ್ಷಣೆಯೂ ಇದೇ ಆಗಿದೆ.

–ಪ್ರಕಾಶ ಎಸ್. ಮನ್ನಂಗಿ,
ಮೋಟೆಬೆನ್ನೂರು

